ಕರ್ನಾಟಕ ಸರ್ಕಾರ

ಸಂಖ್ಯೆ:ಶಿಇ 39 ಐಎಫ್ ಬಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು,
ದಿನಾಂಕ.3/3/2021

ಇವರಿಗೆ,

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001. (e mail dce.commissioner@gmail.com)
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001. (e mail dce.director@gmail.com)
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560 001. (e mail dte.kar@gmail.com)
4. ಆಡಳಿತಾಧಿಕಾರಿಗಳು, ಎನ್.ಸಿ.ಸಿ. ನಿರ್ದೇಶನಾಲಯ(ಎನ್.ಸಿ.ಸಿ.ಕೋಶ), ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು -560 052. (e mail ncccell@gmail.com)

ಕಾಲೇಜು ಶಿಕ್ಷಣ ನಿರ್ದೇಶಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು-560001
ಸಂಖ್ಯೆ: 243
ದಿ: 5-3-21

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ 1833

ಮಾನ್ಯರೇ,

ವಿಷಯ : ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್-31ರಂದು ಸಂಜೆ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಉಲ್ಲೇಖ: ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ.27/1/2021.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಆರ್ಥಿಕ ಇಲಾಖೆಯು 2020-21ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ತೀರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಿದ್ದು, ಆಡಳಿತ ಇಲಾಖೆಗಳು ಬಿಲ್ಲುಗಳನ್ನು ನಿಗಧಿತ ಅವಧಿಯೊಳಗೆ ಸಲ್ಲಿಸಲು ಕ್ರಮವಹಿಸುವಂತೆ ತಿಳಿಸಿರುತ್ತಾರೆ. ಪ್ರತಿ ಲಗತ್ತಿಸಿದೆ. ಅದರಂತೆ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಬಿಲ್ಲುಗಳನ್ನು ನಿಗಧಿತ ಕಾಲಾವಧಿಯಲ್ಲಿ ಖಜಾನೆಗೆ ಸಲ್ಲಿಸಲು ಹಾಗೂ ತಮ್ಮ ಅಧೀನ ಕಛೇರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಉಲ್ಲೇಖಿತ ಪತ್ರದ ಪ್ರತಿಯನ್ನು ವೆಬ್‌ಸೈಟ್ ವಿಳಾಸ: www.finance.karnataka.gov.in ದಿಂದಲೂ ಪಡೆಯಬಹುದಾಗಿದೆ.

ಅಡಕ : ಉಲ್ಲೇಖಿತ ಪತ್ರದ 4 ಪುಟಗಳನ್ನು ಲಗತ್ತಿಸಿದೆ.

ತಮ್ಮ ವಿಶ್ವಾಸಿ,

3/3/2021

(ಈ. ಶಿವರುದ್ರಪ್ಪ)
ಆಂತರಿಕ ಆರ್ಥಿಕ ಸಲಹೆಗಾರರು &
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಶಿಕ್ಷಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ,
ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

---2

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಜಿಇ 2020, ದಿನಾಂಕ:08-01-2020, 19-02-2020, 13-03-2020 ಮತ್ತು 20-03-2020.

2. ಆಯುಕ್ತರು, ಖಜಾನೆ ಇಲಾಖೆ ಇವರ ಪತ್ರ ಸಂಖ್ಯೆ: ಖನಿ.ಪ್ರಕ್ರಿಯೆ/69/2020-21, ದಿನಾಂಕ:04-12-2020.

* * * * *

<u>ಪ್ರಸ್ತಾವನೆ:-</u>

2019-20ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿ:31-3-2020 ರಂದೇ 2019-20ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1)ರ ಸರ್ಕಾರಿ ಆದೇಶಗಳಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿತ್ತು. ಸದರಿ ವೇಳಾಪಟ್ಟಿಯಂತೆ ಇಲಾಖಾ ಅಧಿಕಾರಿಗಳು ಹಾಗೂ ಖಜಾನಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿದ್ದು ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

2020-21ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31-3-2021ರಂದೇ 2020-21ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿರುವುದಾಗಿ ಖಜಾನೆ ಆಯುಕ್ತರು ಮೇಲೆ ಉಲ್ಲೇಖ(2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದಾರೆ. ಆದ್ದರಿಂದ ಈ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಜಿಇ 2021, ಬೆಂಗಳೂರು, ದಿನಾಂಕ:27-01-2021</u>

ಎ) ಆಡಳಿತ ಇಲಾಖೆಗಳ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಗೊಳಿಸಿರುವ ಕಾಲಮಿತಿ:

| ಕ್ರಮ ಸಂಖ್ಯೆ | ಬಿಲ್ಲುಗಳ ಸ್ವರೂಪ/ವಿವರಗಳು | 31-01-2021ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ upload ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | 31-01-2021ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ | |
|---|---|---|---|---|
| | | | ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ | ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
| 1 | 2 | 3 | 4 | 5 |
| 1 | ವೇತನ/ ವೇತನ ಬಾಕಿ ಬಿಲ್ಲುಗಳು/ ಹಬ್ಬದ ಮುಂಗಡ ಬಿಲ್ಲು/ಅನುದಾನಿತ ವೇತನ ಬಿಲ್ಲುಗಳು/ ಇತರೆ ಅನುದಾನಿತ ಬಿಲ್ಲುಗಳು. | 05-03-2021 | 12-03-2021 | 15-03-2021 |

| | | | | |
|---|---|---|---|---|
| 2 | ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು. | 05-03-2021 | 09-03-2021 | 12-03-2021 |
| 3 | EAP ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅನುದಾನ ಬಿಡುಗಡೆಯ ಬಿಲ್ಲುಗಳು. | | 20-03-2021 | 23-03-2021 |
| 4 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಹಾಗೂ EAP, ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಬಿಲ್ಲುಗಳು. | 15-03-2021 | | 23-03-2021 |
| 5 | ಏಪ್ರಿಲ್ ತಿಂಗಳಲ್ಲಿ ಪಾವತಿಯಾಗುವ ಮಾರ್ಚ್ ತಿಂಗಳ ವೇತನ/ವೇತನ ಅನುದಾನಿತ ಬಿಲ್ಲುಗಳು. | | 02-04-2021 ರ ನಂತರ | |
| 6 | ಇಲಾಖೆಗಳು ಹಾಗೂ ಸಚಿವಾಲಯದ ಆಡಳಿತ ಇಲಾಖೆಗಳು ಹೊರಡಿಸುವ ಮರುವಿನಿಯೋಗದ ಬಿಲ್ಲುಗಳು. | | | 16-03-2021 |
| 7 | ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು. | 05-03-2021 | | 12-03-2021 |
| 8 | ಪೂರಕ ಅಂದಾಜು-3 ರಲ್ಲಿ ಸಕ್ರಮಗೊಳಿಸುವ ವೆಚ್ಚದ ಆದೇಶದ ಬಿಲ್ಲುಗಳು. | | 12-03-2021 | 20-03-2021 |
| 9 | ಪೂರಕ ಅಂದಾಜು-3 ರಲ್ಲಿ ಒದಗಿಸಿರುವ ಅನುದಾನದ ಬಿಲ್ಲುಗಳು. | | 23-03-2021 | 23-03-2021 |
| 10 | ZP/TP ಗೆ ಸಂಬಂಧಿಸಿದ ಎಲ್ಲಾ upload ಗಳು. | | 15-03-2021 | |

ಬಿ) ಆಡಳಿತ ಇಲಾಖೆಗಳಿಗೆ ಸೂಚನೆಗಳು:-

1. ದಿನಾಂಕ:31-03-2021ರಂದು ಕಛೇರಿ ವ್ಯವಹಾರ ಅವಧಿ ಮುಗಿದ ನಂತರ ಯಾವುದೇ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

2. ಇಲಾಖಾ ಮುಖ್ಯಸ್ಥರು ಮತ್ತು ಅವರುಗಳ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಈ ಆದೇಶದಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2004, ದಿನಾಂಕ:09-09-2004ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮೇಲೆ ಹೇಳುವ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವನ್ನು ದಿನಾಂಕ:31-03-2021 ರೊಳಗೆ ವೆಚ್ಚ ಮಾಡತಕ್ಕದ್ದು.

4. ಕಾಲಮಿತಿಯೊಳಗೆ ಪರಿಪೂರ್ಣವಾಗಿರುವ ಬಿಲ್ಲುಗಳನ್ನು ಸಲ್ಲಿಸಲು, ಇಲಾಖೆಗಳು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದು. ಡಿ.ಎಸ್.ಸಿ ಸಂಗ್ರಹಣೆ/ ನವೀಕರಣ ಅನುದಾನ ಕೋರಿಕೆ, ಮ್ಯಾಪಿಂಗ್ ಮುಂತಾದ ಚಟುವಟಿಕೆಗಳನ್ನು ಮುಂಚಿತವಾಗಿ ಪರಿಶೀಲಿಸಿ ಯಾವುದೇ ತೊಂದರೆ/ ವಿಳಂಬವಾಗದಂತೆ ಎಚ್ಚರಿಕೆ ವಹಿಸುವುದು.

5. ಕಾಲಮಿತಿಯೊಳಗೆ ಆಯಾ ವರ್ಗದ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು ಕಡ್ಡಾಯವಾಗಿದೆ. ಕಾಲಮಿತಿಯ ನಂತರ ಯಾವುದೇ ಬಿಲ್ಲು ಅಥವಾ ವರ್ಗದ ಬಿಲ್ಲುಗಳನ್ನು (Category of Bills) ಸಲ್ಲಿಸಲು ಆರ್ಥಿಕ ಇಲಾಖೆಯ ಲಿಖಿತ ಆದೇಶದ ಅಗತ್ಯವಿರುತ್ತದೆ.

6. ಬಿಲ್ಲುಗಳನ್ನು ಸಹಮ ಬ್ಯಾಂಕ್ ಅಥವಾ ವೈಯುಕ್ತಿಕ ಠೇವಣಿ ಖಾತೆಗಳಲ್ಲಿ ಮೊತ್ತವನ್ನು ಜಮಾ ಮಾಡಲು ಆರ್ಥಿಕ ಇಲಾಖೆಯ ಲಿಖಿತ ಅನುಮತಿ ಅಗತ್ಯವಿರುತ್ತದೆ.

ಸಿ) ಖಜಾನೆಗಳಿಗೆ ಸೂಚನೆಗಳು:-

1. ಎಲ್ಲಾ ಖಜಾನೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸಲು ಅನುಕೂಲವಾಗುವಂತೆ ದಿನಾಂಕ: 01-04-2021 ನ್ನು ವ್ಯವಹಾರ ರಹಿತ ದಿನವನ್ನಾಗಿ ಘೋಷಿಸಲಾಗಿದೆ.

2. ಖಜಾನೆಗಳು ಮಾರ್ಚ್ 2021ರ ಲೆಕ್ಕಗಳನ್ನು 31ನೇ ಮಾರ್ಚ್ 2021ರ ನಂತರವೂ ತೆರೆದಿರಕೂಡದೆಂದು ಸೂಚಿಸಲಾಗಿದೆ.

3. ಮಹಾಲೇಖಪಾಲರು (ಲೆ ಮತ್ತು ಇ) ರವರು 2020-21ರ ತಾತ್ಕಾಲಿಕ ಲೆಕ್ಕಗಳನ್ನು 10ನೇ ಮೇ 2021ರೊಳಗಾಗಿ ಸರ್ಕಾರಕ್ಕೆ ಕಳುಹಿಸಲು ಅನುವಾಗುವಂತೆ ಖಜಾನಾಧಿಕಾರಿಗಳು ನಿಗದಿತ ಸಮಯದೊಳಗೆ ಮಹಾಲೇಖಪಾಲರಿಗೆ ಮಾರ್ಚ್ 2021ರ ಲೆಕ್ಕಗಳನ್ನು ಸಲ್ಲಿಸತಕ್ಕದ್ದು.

4. ಖಜಾನೆಗಳಿಗೆ ಸಲ್ಲಿಸಲ್ಪಟ್ಟಿರುವ ಎಲ್ಲಾ ಕ್ರಮಬದ್ಧ ಬಿಲ್ಲುಗಳು ವ್ಯಪಗತವಾಗದಂತೆ ಅಗತ್ಯವಿದ್ದಲ್ಲಿ ಹೆಚ್ಚುವರಿ ವೇಳೆ ಕೆಲಸ ನಿರ್ವಹಿಸಿ ನಿಯಮಾನುಸಾರ ವಿಲೇ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.karnataka.gov.in ನಿಂದ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್ ನಾಯಕ್. ಎಲ್)
ಸರ್ಕಾರದ ಉಪ ಕಾರ್ಯದರ್ಶಿ (ಆ & ಸಂ)
ಆರ್ಥಿಕ ಇಲಾಖೆ

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು (A&E)/(G&SSA)/(E&RSA), ಕರ್ನಾಟಕ, ಬೆಂಗಳೂರು.

2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

5) ಸರ್ಕಾರದ ಎಲ್ಲಾ ಅಪರ/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

13) ಎಲ್ಲಾ ಇಲಾಖಾ ಮುಖ್ಯಸ್ಥರು.

14) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.